**All India Radio: Bangalore**
**National Bulletin In Kannada**
**23.06.2026 07.35 a.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**23.06.2026 07.35 a.m.**
**<><><>**

ಮುಖ್ಯಾಂಶಗಳು

1. ಭಾರತ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಮತ್ತು ವಿಶ್ವಾಸಾರ್ಹ ಆರ್ಥಿಕತೆಯಾಗಿದೆ : ಪ್ರಧಾನಿ ನರೇಂದ್ರ ಮೋದಿ
2. ರಸಗೊಬ್ಬರಗಳನ್ನು ಸಾಗಿಸುತ್ತಿದ್ದ ನಾಲ್ಕು ಸರಕು ಹಡಗುಗಳು ಹಾರ್ಮುಜ್ ಜಲಸಂಧಿಯಿಂದ ಹೊರಟಿವೆ : ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯ
3. ರಕ್ಷಣಾ ಕ್ಷೇತ್ರದಲ್ಲಿ ಭಾರತದ ಸ್ವಾವಲಂಬನೆ ಹೆಚ್ಚುತ್ತಿದೆ: ರಕ್ಷಣಾ ಸಚಿವ ರಾಜನಾಥ್ ಸಿಂಗ್
4. ೨೦೨೫ ರಲ್ಲಿ ಭಾರತ ವಿಶ್ವದ ಅಗ್ರ ಹಡಗು ಮರುಬಳಕೆ ರಾಷ್ಟ್ರವಾಗಿದೆ : ಕೇಂದ್ರ ಸರ್ಕಾರ
5. ಫಿಫಾ ವಿಶ್ವಕಪ್ : ಇರಾಕ್ ಅನ್ನು ೩-೦ ಗೋಲುಗಳಿಂದ ಸೋಲಿಸಿ ನಾಕೌಟ್ ಹಂತಕ್ಕೆ ಪ್ರವೇಶಿಸಿದ ಫ್ರಾನ್ಸ್

<><><>

ಭಾರತ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಮತ್ತು ವಿಶ್ವಾಸಾರ್ಹ ಆರ್ಥಿಕತೆಯಾಗಿದ್ದು, ನಂಬಿಕೆಯ ಶಕ್ತಿಯಾಗಿ ಮಾರ್ಪಟ್ಟಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ನಿನ್ನೆ ನವದೆಹಲಿಯಲ್ಲಿ ಖಾಸಗಿ ಮಾಧ್ಯಮ ಸಂಸ್ಥೆ ಆಯೋಜಿಸಿದ್ದ ಶೃಂಗಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ಕಳೆದ ೧೨ ವರ್ಷಗಳಲ್ಲಿ 'ರಾಷ್ಟ್ರ ಮೊದಲು' ಎಂಬ ಮನೋಭಾವ ಭಾರತದ ಸಾಧನೆಗಳಿಗೆ ಮಾರ್ಗದರ್ಶನ ನೀಡಿದೆ. ಪ್ರಸ್ತುತ ನಿರ್ಧಾರಗಳು ಮತ್ತು ಕ್ರಮಗಳು ಮುಂಬರುವ ಶತಮಾನಗಳವರೆಗೆ ದೇಶದ ಭವಿಷ್ಯಕ್ಕೆ ಅಡಿಪಾಯವಾಗಿದೆ ಎಂದು ತಿಳಿಸಿದ್ದಾರೆ. ಜಾಗತಿಕ ನಾಯಕರು "ರಾಷ್ಟ್ರ ಮೊದಲು" ಎಂಬ ತತ್ವಕ್ಕೆ ಭಾರತದ ಅಚಲ ಬದ್ಧತೆಯನ್ನು ಅಂಗೀಕರಿಸಿದ್ದು, ಜಿ-೭ ಶೃಂಗಸಭೆಯಲ್ಲಿ ಇತ್ತೀಚೆಗೆ ಭಾಗವಹಿಸಿದ್ದನ್ನು ಪ್ರಧಾನಿ ನೆನಪಿಸಿಕೊಂಡರು.

<><><>

ಯೂರಿಯಾ, ಡಿ-ಅಮೋನಿಯಂ ಫಾಸ್ಫೇಟ್ (ಡಿಎಪಿ) ಮತ್ತು ಸಲ್ಫರ್ ಸರಕನ್ನು ಹೊತ್ತ ನಾಲ್ಕು ಹಡಗುಗಳು ಕಳೆದ ವಾರ ಹಾರ್ಮುಜ್ ಜಲಸಂಧಿಯನ್ನು ಯಶಸ್ವಿಯಾಗಿ ದಾಟಿವೆ ಎಂದು ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯ ತಿಳಿಸಿದೆ. ಈ ಹಡಗುಗಳು ಪ್ರಸ್ತುತ ಆಂಧ್ರಪ್ರದೇಶದ ಕೃಷ್ಣಪಟ್ಟಣಂ ಮತ್ತು ಕಾಕಿನಾಡ, ಒಡಿಶಾದ ಪಾರದೀಪ್ ಬಂದರು ಮತ್ತು ಗುಜರಾತ್‌ನ ಮುಂದ್ರ ಬಂದರು ಸೇರಿದಂತೆ ದೇಶಾದ್ಯಂತ ತಮ್ಮ ಗೊತ್ತುಪಡಿಸಿದ ಗಮ್ಯಸ್ಥಾನ ಬಂದರುಗಳ ಕಡೆಗೆ ಸಾಗುತ್ತಿವೆ. ದೇಶದ ಅಸ್ತಿತ್ವದಲ್ಲಿರುವ ರಸಗೊಬ್ಬರ ಬಫರ್‌ಗಳಿಗೆ ಪೂರೈಸಲು ಮತ್ತು ಪ್ರಸಕ್ತ ಕೃಷಿ ಅವಶ್ಯಕತೆಗಳನ್ನು ಖಚಿತಪಡಿಸಿಕೊಳ್ಳಲು ಈ ಹೊಸ ಆಮದುಗಳನ್ನು ತಕ್ಷಣವೇ ಒದಗಿಸಲಾಗುವುದು ಎಂದು ಸಚಿವಾಲಯ ತಿಳಿಸಿದೆ. ದೇಶದ ಸಂಚಿತ ರಸಗೊಬ್ಬರ ದಾಸ್ತಾನು ೧೯೭ ಲಕ್ಷ ಟನ್‌ಗಳಷ್ಟಿದ್ದು, ಕಳೆದ ವರ್ಷದ ಇದೇ ಅವಧಿಯಲ್ಲಿ ಇದು ೧೭೮ ಲಕ್ಷ ಟನ್‌ಗಳಷ್ಟಿತ್ತು. ಬಿಕ್ಕಟ್ಟಿನ ನಂತರ ದೇಶೀಯ ರಸಗೊಬ್ಬರ ಉತ್ಪಾದನೆಯು ಗಮನಾರ್ಹವಾಗಿ ಏರಿಕೆಯಾಗಿ ೧೩೩ ಲಕ್ಷ ಮೆಟ್ರಿಕ್ ಟನ್‌ಗಳನ್ನು ತಲುಪಿದೆ ಎಂದು ಸಚಿವಾಲಯ ತಿಳಿಸಿದೆ.

<><><>

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ರಕ್ಷಣಾ ಕ್ಷೇತ್ರದಲ್ಲಿ ಭಾರತದ ಸ್ವಾವಲಂಬನೆ ಹೆಚ್ಚುತ್ತಿರುವ ಬಗ್ಗೆ ಪ್ರಮುಖ ಹೇಳಿಕೆ ನೀಡಿದ್ದಾರೆ. ಭಾರತ ನೂರಕ್ಕೂ ಹೆಚ್ಚು ದೇಶಗಳಿಗೆ ರಕ್ಷಣಾ ಸಾಧನಗಳನ್ನು ರಫ್ತು ಮಾಡುತ್ತಿದ್ದು, ಈ ಮೂಲಕ ಈ ವಲಯದಲ್ಲಿ ಸ್ವಾವಲಂಬಿಯಾಗುತ್ತಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ನವದೆಹಲಿಯಲ್ಲಿ ನಿನ್ನೆ ನಡೆದ ಕಾರ್ಯಕ್ರಮವೊಂದನ್ನು ಉದ್ದೇಶಿಸಿ ಮಾತನಾಡಿದ ರಕ್ಷಣಾ ಸಚಿವರು, ಆಪರೇಷನ್ ಸಿಂಧೂರ್ ಸಮಯದಲ್ಲಿ, ದೇಶದ ಸಶಸ್ತ್ರ ಪಡೆಗಳು ಭಾರತೀಯ ನಾಗರಿಕರ ಹತ್ಯೆಗೆ ಕಾರಣರಾದವರನ್ನು ಮಾತ್ರ ಗುರಿಯಾಗಿಸಿಕೊಂಡವು ಎಂದು ಹೇಳಿದರು. ಸಾಮರ್ಥ್ಯ ಮತ್ತು ಸಂಸ್ಕೃತಿ ಎರಡಕ್ಕೂ ಒತ್ತು ನೀಡುವ ಮೂಲಕ ಸಬಲೀಕೃತ ಭಾರತವನ್ನು ನಿರ್ಮಿಸಲು ಸರ್ಕಾರ ಬದ್ಧವಾಗಿದೆ ಎಂದು ಅವರು ತಿಳಿಸಿದರು. ಈ ಸಂದರ್ಭದಲ್ಲಿ, ದೇಶದ ಸಂಸ್ಕೃತಿ ಸಾವಿರಾರು ವರ್ಷಗಳಿಂದ ಮಾನವೀಯತೆಗೆ ದಾರಿ ತೋರಿಸಿದೆ. ನಾಗರಿಕರಲ್ಲಿ ರಾಷ್ಟ್ರೀಯತೆಯ ಭಾವನೆಯನ್ನು ಹುಟ್ಟುಹಾಕಿದ್ದಕ್ಕಾಗಿ ಭಾರತೀಯ ಸಂತರನ್ನು ಅವರು ಶ್ಲಾಘಿಸಿದರು.

<><><>

೨೦೨೫ರಲ್ಲಿ ಭಾರತ ವಿಶ್ವದ ಅಗ್ರ ಹಡಗು ಮರುಬಳಕೆ ರಾಷ್ಟ್ರವಾಗಿದೆ. ವಿಶ್ವಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿ ಸಮ್ಮೇಳನದ ಇತ್ತೀಚಿನ ವರದಿಯ ಪ್ರಕಾರ, ಜಾಗತಿಕ ಹಡಗು ಮರುಬಳಕೆಯಲ್ಲಿ ಭಾರತದ ಪಾಲು ೨೦೨೪ರಲ್ಲಿ ಶೇಕಡ ೩೦.೧ ರಿಂದ ೨೦೨೫ ರಲ್ಲಿ ಶೇಕಡ ೩೫.೪ ಕ್ಕೆ ಏರಿದೆ ಎಂದು ಬಂದರುಗಳು, ಹಡಗು ಮತ್ತು ಜಲಮಾರ್ಗಗಳ ಸಚಿವಾಲಯ ತಿಳಿಸಿದೆ. ೨೦೨೫ ರಲ್ಲಿ ದೇಶದಲ್ಲಿ ಹಡಗು ಮರುಬಳಕೆ ಗಣನೀಯವಾಗಿ ೨.೯೯ ಮಿಲಿಯನ್ ಒಟ್ಟು ಟನ್‌ಗಳಿಗೆ ಏರಿದೆ. ಇದು ೨೦೨೪ರಲ್ಲಿ ೧.೮೭ ಮಿಲಿಯನ್ ಒಟ್ಟು ಟನ್‌ಗಳಿಗಿಂತ ಸುಮಾರು ಶೇಕಡ ೬೦ ರಷ್ಟು ಹೆಚ್ಚಾಗಿದೆ. ಈ ಸಾಧನೆಯೊಂದಿಗೆ, ಮ್ಯಾರಿಟೈಮ್ ಇಂಡಿಯಾ ವಿಷನ್ ೨೦೩೦ರ ಅಡಿಯಲ್ಲಿ ವಿಶ್ವದ ಪ್ರಮುಖ ಹಡಗು ಮರುಬಳಕೆ ರಾಷ್ಟ್ರವಾಗಲು ನಿಗದಿಪಡಿಸಿದ ಗುರಿಯನ್ನು ನಿಗದಿತ ಸಮಯಕ್ಕಿಂತ ಐದು ವರ್ಷಗಳ ಮೊದಲೇ ಸಾಧಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ. ಕೇಂದ್ರ ಬಂದರುಗಳು, ಹಡಗು ಸಾಗಣೆ ಮತ್ತು ಜಲಮಾರ್ಗಗಳ ಸಚಿವ ಸರ್ಬಾನಂದ ಸೋನೋವಾಲ್ ಅವರು, ವಿಶ್ವದ ಅಗ್ರ ಹಡಗು ಮರುಬಳಕೆ ರಾಷ್ಟ್ರವಾಗಿ ಭಾರತ ಹೊರಹೊಮ್ಮುತ್ತಿರುವುದು ನಿರಂತರ ನೀತಿ ಸುಧಾರಣೆಗಳು, ಕೈಗಾರಿಕಾ ಪ್ರಯತ್ನಗಳು ಮತ್ತು ಅಂತಾರಾಷ್ಟ್ರೀಯ ಪರಿಸರ ಮತ್ತು ಸುರಕ್ಷತಾ

ಮಾನದಂಡಗಳ ಅನುಸರಣೆಯ ಯಶಸ್ಸನ್ನು ಪ್ರತಿಬಿಂಬಿಸುತ್ತದೆ ಎಂದು  ಹೇಳಿದರು. ಜವಾಬ್ದಾರಿಯುತ ಮತ್ತು ಸುಸ್ಥಿರ ಹಡಗು ಮರುಬಳಕೆಗಾಗಿ ಜಾಗತಿಕ ಕೇಂದ್ರವಾಗಿ ದೇಶದ ಸ್ಥಾನವನ್ನು ಈ ಸಾಧನೆಯು ಬಲಪಡಿಸುತ್ತದೆ ಎಂದು ಅವರು ತಿಳಿಸಿದ್ದಾರೆ.

<><><><>

ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರು ಇಂದು ನವದೆಹಲಿಯಲ್ಲಿ ಭಾರತೀಯ ರಾಷ್ಟ್ರೀಯ ಕೃಷಿ ಸಹಕಾರಿ ಮಾರುಕಟ್ಟೆ ಒಕ್ಕೂಟ - ನಾಫೆಡ್ ಹರಾಜು ಪೋರ್ಟಲ್ ಅನ್ನು ಉದ್ಘಾಟಿಸಲಿದ್ದಾರೆ. ಹರಾಜು ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ದಕ್ಷತೆ ಮತ್ತು ಕಾರ್ಯಾಚರಣೆಯ ಸುಲಭತೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಈ ಪೋರ್ಟಲ್‌ನ ಉದ್ಘಾಟನೆಯು ಒಂದು ಪ್ರಮುಖ ಹೆಜ್ಜೆಯಾಗಿದೆ. ರೈತರು, ಸದಸ್ಯ ಸಂಸ್ಥೆಗಳು ಮತ್ತು ಪಾಲುದಾರರ ಹಿತದೃಷ್ಟಿಯಿಂದ ಹರಾಜು-ಸಂಬಂಧಿತ ಚಟುವಟಿಕೆಗಳನ್ನು ಸುಗಮಗೊಳಿಸಲು ಮತ್ತು ನಾಫೆಡ್‌ನ ಒಟ್ಟಾರೆ ಕಾರ್ಯನಿರ್ವಹಣೆಯನ್ನು ಹೆಚ್ಚಿಸಲು ಈ ಪೋರ್ಟಲ್ ಡಿಜಿಟಲ್ ವೇದಿಕೆಯನ್ನು ಒದಗಿಸುವ ನಿರೀಕ್ಷೆಯಿದೆ. ಕಾರ್ಯಕ್ರಮದಲ್ಲಿ, ಗೃಹ ಸಚಿವರು ನಫೇಡ್ ನ ಹಲವಾರು ಪ್ರಮುಖ ಡಿಜಿಟಲ್ ಮತ್ತು ರೈತ-ಕೇಂದ್ರಿತ ಉಪಕ್ರಮಗಳನ್ನು ಸಹ ಪ್ರಾರಂಭಿಸಲಿದ್ದಾರೆ ಎಂದು ಸಹಕಾರ ಸಚಿವಾಲಯ ತಿಳಿಸಿದೆ. ಇವುಗಳಲ್ಲಿ ರೈತರ ಮಕ್ಕಳಿಗೆ ನಫೇಡ್-ಕಲ್ಯಾಣ್ ವಿದ್ಯಾರ್ಥಿವೇತನ, ದ್ವಿದಳ ಧಾನ್ಯಗಳು ಮತ್ತು ಎಣ್ಣೆಬೀಜಗಳ ದಾಸ್ತಾನು ನಿರ್ವಹಣೆಗಾಗಿ ದೃಷ್ಟಿ ಪೋರ್ಟಲ್ ಮತ್ತು ಉದ್ಯಮ ಸಂಪನ್ಮೂಲ ಯೋಜನೆಯನ್ನು ಬಲಪಡಿಸಲು ಉದ್ಯಮ ಸಂಪನ್ಮೂಲ ಯೋಜನಾ ಪೋರ್ಟಲ್ ಸೇರಿವೆ. ನಂತರ ಅಮಿತ್ ಶಾ, ನಫೇಡ್‌ನ ನಿರ್ದೇಶಕರ ಮಂಡಳಿಯ ಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಸಭೆಯಲ್ಲಿ, ಕೇಂದ್ರ ಸಚಿವರು ತಮ್ಮ ಹಿಂದಿನ ಭೇಟಿಯ ಸಮಯದಲ್ಲಿ ನೀಡಿದ ನಿರ್ದೇಶನಗಳ ಮೇಲೆ ಮತ್ತು ನಫೇಡ್‌ನ ಭವಿಷ್ಯದ ಮಾರ್ಗಸೂಚಿಯ ಕುರಿತು ತಿಳಿಸಲಿದ್ದಾರೆ ಎಂದು ಸಚಿವಾಲಯ ತಿಳಿಸಿದೆ. ಈ ಡಿಜಿಟಲ್ ಮತ್ತು ಕಲ್ಯಾಣ ಉಪಕ್ರಮಗಳ ಆರಂಭವು ಪ್ರಧಾನಿ ನರೇಂದ್ರ ಮೋದಿಯವರ ಸಹಕಾರದಿಂದ ಸಮೃದ್ಧಿ ಎಂಬ ದೃಷ್ಟಿಕೋನ ಮತ್ತು ತಂತ್ರಜ್ಞಾನ, ಪಾರದರ್ಶಕತೆ ಮತ್ತು ರೈತ ಕೇಂದ್ರಿತ ಸುಧಾರಣೆಗಳ ಮೂಲಕ ಸಹಕಾರಿ ಸಂಸ್ಥೆಗಳನ್ನು ಬಲಪಡಿಸುವ ಸರ್ಕಾರದ ಪ್ರಯತ್ನಗಳೊಂದಿಗೆ ಹೊಂದಿಕೆಯಾಗುತ್ತದೆ.

<><><><>

ಫಿಫಾ ವಿಶ್ವಕಪ್‌ನಲ್ಲಿ, ಫ್ರಾನ್ಸ್ ತಂಡವು ಮುಂಜಾನೆ ಫಿಲಡೆಲ್ಫಿಯಾ ಕ್ರೀಡಾಂಗಣದಲ್ಲಿ ನಡೆದ ಗ್ರೂಪ್ ಐ ಪಂದ್ಯದಲ್ಲಿ ಇರಾಕ್ ಅನ್ನು ೩-೦ ಗೋಲುಗಳಿಂದ ಸೋಲಿಸಿ ನಾಕೌಟ್ ಹಂತಕ್ಕೆ ಪ್ರವೇಶವನ್ನು ಖಚಿತಪಡಿಸಿಕೊಂಡಿತು. ಕಿಲಿಯನ್ ಎಂಬಪ್ಪೆ ಎರಡು ಗೋಲುಗಳನ್ನು ಗಳಿಸಿದರು ಮತ್ತು ಔಸ್ಮಾನೆ ಡೆಂಬೆಲೆ ಮೂರನೇ ಗೋಲು ಗಳಿಸಿದರು. ಇದಕ್ಕೂ ಮೊದಲು, ಅರ್ಜೆಂಟೀನಾ ನಿನ್ನೆ ರಾತ್ರಿ ಯುನೈಟೆಡ್ ಸ್ಟೇಟ್ಸ್‌ನ ಆರ್ಲಿಂಗ್ಟನ್‌ನಲ್ಲಿ ನಡೆದ ಗ್ರೂಪ್ 'ಎ' ಪಂದ್ಯದಲ್ಲಿ ಆಸ್ಟ್ರಿಯಾವನ್ನು ೨-೦ ಗೋಲುಗಳಿಂದ ಸೋಲಿಸಿ ೩೨ ರೌಂಡ್‌ನಲ್ಲಿ ಸ್ಥಾನ ಪಡೆದುಕೊಂಡಿತು. ಅರ್ಜೆಂಟೀನಾ ನಾಯಕ ಲಿಯೋನೆಲ್ ಮೆಸ್ಸಿ ೩೮ನೇ ನಿಮಿಷದಲ್ಲಿ ಗೋಲು ಗಳಿಸುವ ಮೂಲಕ ತನ್ನ ಎರಡು ಗೋಲುಗಳೊಂದಿಗೆ, ಮೆಸ್ಸಿ ತನ್ನ ಫಿಫಾ ವಿಶ್ವಕಪ್ ಸಂಖ್ಯೆಯನ್ನು ೧೮ ಕ್ಕೆ ಏರಿಸಿದರು, ಜರ್ಮನಿಯ ಮಿರೋಸ್ಲಾವ್ ಕ್ಲೋಸ್ ಅವರ ೧೬ ಗೋಲುಗಳ ದಾಖಲೆಯನ್ನು ಹಿಂದಿಕ್ಕಿ ವಿಶ್ವಕಪ್ ಇತಿಹಾಸದಲ್ಲಿ ಅತಿ ಹೆಚ್ಚು ಗೋಲು ಗಳಿಸಿದ ಆಟಗಾರರಾದರು.

<><><><>

ಹಾಕಿಯಲ್ಲಿ, ಭಾರತೀಯ ಪುರುಷರ ಹಾಕಿ ತಂಡವು ಇಂದು ಎಫ್‌ಐಎಚ್ ಪ್ರೊ ಲೀಗ್‌ನ ಆರಂಭಿಕ ಪಂದ್ಯದಲ್ಲಿ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು ಎದುರಿಸಲಿದೆ. ೨೦೨೪ರಲ್ಲಿ ಚೀನಾದ ಹುಲುನ್‌ಬುಯಿರ್‌ನಲ್ಲಿ ನಡೆದ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಪಂದ್ಯದ ನಂತರ ಭಾರತ ಮತ್ತು ಪಾಕಿಸ್ತಾನ ನಡುವಿನ ಮೊದಲ ಮುಖಾಮುಖಿ ಇದಾಗಿದ್ದು, ಆ ಪಂದ್ಯದಲ್ಲಿ ಭಾರತ ೨-೧ ಅಂತರದ ಜಯ ಸಾಧಿಸಿತ್ತು. ಕಳೆದ ೧೦ ವರ್ಷಗಳಲ್ಲಿನ ೧೭ ಪಂದ್ಯಗಳಲ್ಲಿ ಭಾರತ ೧೫ ಗೆಲುವುಗಳು ಮತ್ತು ಎರಡು ಡ್ರಾಗಳನ್ನು ಸಾಧಿಸಿದೆ. ಎಫ್‌ಐಎಚ್ ಪ್ರೊ ಲೀಗ್‌ನ ರೋಟರ್‌ಡ್ಯಾಮ್ ಲೆಗ್‌ನ ನಿನ್ನೆಯ ಅಂತಿಮ ಪಂದ್ಯದಲ್ಲಿ ವಿಶ್ವದ ಎರಡನೇ ಶ್ರೇಯಾಂಕದ ನೆದರ್‌ಲ್ಯಾಂಡ್ಸ್ ವಿರುದ್ಧ ೩-೨ ಅಂತರದ ಜಯಗಳಿಸಿದ ನಂತರ ಭಾರತೀಯ ಹಾಕಿ ತಂಡವು ತನ್ನ ವೇಗವನ್ನು ಮುಂದುವರಿಸುವ ಗುರಿಯನ್ನು ಹೊಂದಿದೆ.

<><><><>

ಕ್ಯಾಲಿಫೋರ್ನಿಯಾದಲ್ಲಿ ಇಂದಿನಿಂದ ಆರಂಭವಾಗಲಿರುವ ಯುಎಸ್ ಓಪನ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಮೆಂಟ್‌ನಲ್ಲಿ ತಾರಾ ಷಟ್ಲರ್‌ಗಳಾದ ಲಕ್ಷ್ಯ ಸೇನ್ ಮತ್ತು ತನ್ವಿ ಶರ್ಮಾ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ. ವಿಶ್ವದ ನಂ. ೧೪ನೇ ಶ್ರೇಯಾಂಕದ ಲಕ್ಷ್ಯ ಸೇನ್, ಪುರುಷರ ಸಿಂಗಲ್ಸ್ ವಿಭಾಗದ ಆರಂಭಿಕ ಸುತ್ತಿನಲ್ಲಿ ಬೆಲ್ಜಿಯಂನ ಜೂಲಿಯನ್ ಕರಾಗ್ಗಿ ಮತ್ತು ಐದನೇ ಶ್ರೇಯಾಂಕದ ಕಿಡಂಬಿ ಶ್ರೀಕಾಂತ್ ತಮ್ಮ ಮೊದಲ ಸುತ್ತಿನ ಪಂದ್ಯದಲ್ಲಿ ಚೈನೀಸ್ ತೈಪೆಯ ಲಿಯಾವೊ ಜುವೊ-ಫು ಅವರನ್ನು ಎದುರಿಸಲಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>